ರುದ್ರಭೂಮಿ ಒತ್ತುವರಿಯಾಗಿರುವುದು

3087 (4081); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಯಪುರ ಜಿಲ್ಲೆಯ ಸಿಂಧಗಿ ಕ್ಷೇತ್ರದಲ್ಲಿ ರುದ್ರಭೂಮಿ ಇಲ್ಲದ ಗ್ರಾಮಗಳ ಸಂಖ್ಯೆ ಎಷ್ಟು ಹಾಗೂ ಆ ಗ್ರಾಮಗಳು ಯಾವುವು (ಲಭ್ಯವಿರುವ ಕ್ಷೇತ್ರದ ವಿಸ್ತೀರ್ಣ (ಎಕರೆಗಳಲ್ಲಿ) ವಿವರ ನೀಡುವುದು);

ಆ) ಇದರಲ್ಲಿ ಅಕ್ರಮವಾಗಿ ಎಷ್ಟು ಎಕರೆ ರುದ್ರಭೂಮಿ ಒತ್ತುವರಿಯಾಗಿದೆ(ವಿವರ) ಒದಗಿಸುವುದು);

ಇ) ಈ ಅತಿಕ್ರಮಣವಾದ ರುದ್ರಭೂಮಿಯನ್ನು ತೆರವುಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಈ) ರುದ್ರಭೂಮಿ ಇಲ್ಲದೇ ಇರುವ ಗ್ರಾಮಗಳಿಗೆ ರುದ್ರಭೂಮಿ ಒದಗಿಸುವ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ವಿಜಯಪುರ ಜಿಲ್ಲೆಯ ಸಿಂಧಗಿ ಕ್ಷೇತ್ರದಲ್ಲಿ ರುದ್ರಭೂಮಿ ಇಲ್ಲದ ಗ್ರಾಮಗಳ ಸಂಖ್ಯೆ:34. ವಿವರ ಈ ಕೆಳಕಂಡಂತೆ ಒದಗಿಸಲಾಗಿದೆ. ಮುಂದುವರಿದು ರುದ್ರಭೂಮಿ ಉದ್ದೇಶಕ್ಕಾಗಿ ಈ ಕೆಳಕಂಡ ಗ್ರಾಮಗಳಲ್ಲಿ ಸರ್ಕಾರಿ ಜಮೀನನ್ನು ಗುರುತಿಸಲಾಗಿದೆ.

ಕ್ರ.ಸಂ	ಗ್ರಾಮಗಳ ಹೆಸರು	ಲಭ್ಯವಿರುವ ಕ್ಷೇತ್ರ ಸರ್ಕಾರಿ ಜಮೀನಿನ ಕ್ಷೇತ್ರ ಎಕರೆ/ಗುಂಟೆ
1)	ಯಂಕಂಚಿ	2–00
2)	ಖೈನೂರ	2–00
3)	ಡವಳಾರ	2–00
4)	ಚಿಕ್ಕಲಲ್ಲಾಪುರ	2–00
5)	ಹೊನ್ನಳ್ಳಿ	1–00

6)	ಕರವಿನಾಳ	2–00
7)	ಮಾಡಬಾಳ	2–00
8)	ಮನ್ನಾಪುರ	2–00
9)	ಅಂತರಗಂಗಿ	–
10)	ಬ್ಯಾಕೋಡ	1–24
11)	ಬನ್ನೇಟ್ಟಿ ಪಿ.ಎ	–
12)	ಪುರದ್ಯಾಳ	2–00
13)	ರಾಂಪುರ ಪಿ.ಎ	2–00
14)	ಗಣಿಹಾರ	2–00
15)	ಗೊರವಗುಂಡಗಿ	2–00
16)	ನಾಗಾವಿ ಕೆ.ಡಿ	0–35
17)	ಮಂಗಳೂರ	–
18)	ಶಂಬೇವಾಡ	–
19)	ಬಗಲೂರ	2–00
20)	ಶಿರಸಗಿ	1–00
21)	ಹಂಚಿನಾಳ	0–20
22)	ಗುಡ್ಡಳ್ಳಿ	1–17
23)	ತೊಂಟಾಪುರ	–
24)	ಆಹೇರಿ	–
25)	ಸೋಮಜಾಳ	2–00
26)	ಕೊಂಡಗೂಳಿ	2–00
27)	ಇಬ್ರಾಹಿಂಪೂರ	2–00
28)	ದೇವೂರ	2–00
29)	ನಿವಾಳಖೇಡ	2–00

30)	ಚಟ್ನಳ್ಳಿ	2–00
31)	ಅಂಬಳನೂರ	–
32)	ಕದರಾಪೂರ	2–00
33)	ಪಡಗಾನೂರ	2–00
34)	ಆನೆಮಾಡು	–
	ಒಟ್ಟು	46–16

ಆ) ಈ ಕ್ಷೇತ್ರದಲ್ಲಿ ಯಾವುದೇ ರುದ್ರಭೂಮಿಯ ಜಮೀನು ಒತ್ತುವರಿಯಾದ ಬಗ್ಗೆ ವರದಿಯಾಗಿಲ್ಲ.

ಇ) ಮತ್ತು ಈ) ರುದ್ರಭೂಮಿ ಸೌಲಭ್ಯಕ್ಕಾಗಿ ಮೀಸಲಿರಿಸಲಾದ ಜಮೀನು ಅತಿಕ್ರಮಣವಾಗಿರುವುದು ಕಂಡುಬಂದಲ್ಲಿ ನಿಯಮಾನುಸಾರ ತೆರವುಗೊಳಿಸಲಾಗುವುದು.

ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 149 ಎಲ್‌ಜಿಪಿ 2014, ದಿನಾಂಕ:11–09–2014ರಲ್ಲಿ ತಿಳಿಸಲಾದ ಮಾನದಂಡಗಳನ್ನು ಅನುಸರಿಸಿ ರುದ್ರಭೂಮಿ ಸೌಲಭ್ಯಕ್ಕಾಗಿ ಜಮೀನು ಮಂಜೂರು ಮಾಡಲಾಗುತ್ತದೆ.

ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆ ಮಾತ್ರ ಗರಿಷ್ಟ 2–00ಎಕರೆ ಮೀರದಂತೆ ಖಾಸಗಿಯವರಿಂದ ಜಮೀನನ್ನು ಖರೀದಿಸಿ/ ಭೂಸ್ವಾಧೀನಪಡಿಸಿಕೊಂಡು ರುದ್ರಭೂಮಿಗಾಗಿ ಕಾಯ್ದಿರಿಸಲು ಕ್ರಮ ವಹಿಸಲಾಗುವುದು.